MS – 011

# IV Sem. B.Com. Examination, May 2011
## (Freshers Scheme)
## ಕನ್ನಡ ಭಾಷಾ ಪತ್ರಿಕೆ – IV
## ವ್ಯಾವಹಾರಿಕ ಕನ್ನಡ ಮತ್ತು ಸಾಹಿತ್ಯ ಸಂವಾದ – 2

Time : 3 Hours Max. Marks : 90

### ಭಾಗ – 1

### ವ್ಯಾವಹಾರಿಕ ಕನ್ನಡ (50 ಅಂಕಗಳು)

I. ಅ) ಮೂರು ಪ್ರಶ್ನೆಗಳಿಗೆ ಉತ್ತರಿಸಿ : (3×10=30)

1) ಸಮಿತಿಯ ವರದಿ ಎಂದರೇನು ? ನಿಮ್ಮ ಕಾಲೇಜಿನ ಕ್ರೀಡಾ ಚಟುವಟಿಕೆಗಳ ಸುಧಾರಣೆಗಾಗಿ ಅಧ್ಯಾಪಕರ ಸಮಿತಿಯೊಂದು ಪ್ರಾಂಶುಪಾಲರಿಗೆ ನೀಡಿದಂತೆ ಸಮಿತಿಯ ವರದಿಯೊಂದನ್ನು ತಯಾರಿಸಿ.

2) ಕ್ರಿಕೆಟ್ ಪಂದ್ಯವೊಂದರಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತದ ಗೆಲುವಿನ ಬಗ್ಗೆ ಬೇರೆ ಬೇರೆ ಪತ್ರಿಕೆಗಳ ಶೀರ್ಷಿಕೆಗಳು ಹೀಗಿವೆ.

   – ಆಸ್ಟ್ರೇಲಿಯಾ ವಿರುದ್ಧ ಭಾರತದ ಗೆಲುವು
   – ಸೇಡು ತೀರಿಸಿಕೊಂಡ ಭಾರತ
   – ಮುಗ್ಗರಿಸಿದ ಆಸ್ಟ್ರೇಲಿಯಾ
   – ವೇಗಿಗಳ ಕೈಚಳಕ : ಆಸ್ಟ್ರೇಲಿಯಾಗೆ ಮಾರಕ

   ಧೋರಣೆಯ ದೃಷ್ಟಿಯಿಂದ ಇವುಗಳ ನಡುವಿನ ವ್ಯತ್ಯಾಸವನ್ನು ವಿಶ್ಲೇಷಿಸಿ.

3) ವಾಣಿಜ್ಯ ಜಾಹೀರಾತುಗಳಲ್ಲಿ ಗ್ರಾಹಕ ಪದಾರ್ಥಗಳ ಪ್ರಚಾರದ ವೈಖರಿ ಹೇಗಿರುತ್ತದೆ ಎಂಬುದನ್ನು ಪರಿಶೀಲಿಸಿ.

4) ವಾರ್ಷಿಕ ವರದಿ ಎಂದರೇನು ? ಪ್ರಸಕ್ತ ಸಾಲಿನಲ್ಲಿ ನಿಮ್ಮ ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ.

5) ಕನ್ನಡದಲ್ಲಿ ಕಂಪ್ಯೂಟರನ್ನು ಹೇಗೆ ಬಳಸಿಕೊಳ್ಳಲಾಗುತ್ತದೆ ಎಂಬುದನ್ನು ಪರಿಚಯಿಸಿ.

ಆ) ನಾಲ್ಕಕ್ಕೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ : (4×5=20)

1) ಏಕವ್ಯಕ್ತಿ ವರದಿ
2) ಕಾರ್ಯಕ್ರಮದ ವರದಿ
3) ಜಾಹೀರಾತಿನಲ್ಲಿ ಮಹಿಳೆ
4) ವರ್ಗೀಕೃತ ಜಾಹೀರಾತು
5) 'ಶೇಕಡಾ 50 ರಿಯಾಯಿತಿ ಮಾರಾಟ' – ನಿಮ್ಮ ಅನಿಸಿಕೆ
6) ಕನ್ನಡದ ಅಂತರ್‌ಜಾಲ

## ಭಾಗ – 2

### ಸಾಹಿತ್ಯ ಸಂವಾದ – 2 (40 ಅಂಕಗಳು)

II. ಎರಡು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆ ಆಧರಿಸಿ ಉತ್ತರಿಸಿ : (2×5=10)

1) 'ಮೇಷ್ಟ್ರರ ಮನೆಗೇನೋ ಡೆಕ್ಕನ್ ಹೆರಾಲ್ಡ್ ಬರುತ್ತಿತ್ತು. ಚೇರ್ಮನ್ ಗೌಡರ ಮನೆಗೆ ಪಂಚಾಯಿತಿ ಆಫೀಸಿನ ಪ್ರಜಾವಾಣಿ ಹೋಗುತ್ತಿತ್ತು.' – ಈ ಎರಡು ವಾಕ್ಯಗಳ ನಡುವಿನ ವ್ಯತ್ಯಾಸವನ್ನು ಹೇಗೆ ಗ್ರಹಿಸುತ್ತೀರಿ ?

2) 'ನೆಲದ ವಾರಸು ಯಾರಲಾ ?' – ಈ ಪ್ರಶ್ನೆಯ ಅರ್ಥವೇನು ?

3) ''ಮನೆಗೊಬ್ಬರಂತೆ ಅಮೇರಿಕಾಗೆ ಹೋದ ನಮ್ಮವರು ಈಗ ಮನೆಗೊಬ್ಬರಂತೆ ಹಿಂದಿರುಗಿ ಬರುತ್ತಿದ್ದಾರೆ.'' – ಈ ಮಾತಿನ ಮೂಲಕ ಲೇಖಕರು ಏನನ್ನು ಸೂಚಿಸುತ್ತಿದ್ದಾರೆ ?

4) ''ತಾಯಂದಿರು ಹೆರದಲೆ ಹುಟ್ಟಿದ ಮಾನವ ಶಿಶುಗಳು ಯಂತ್ರಗಳು.'' – ಈ ವಾಕ್ಯ ಯಂತ್ರಗಳ ಬಗ್ಗೆ ಏನನ್ನು ಹೇಳುತ್ತದೆ ?

III. ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : (2×5=10)

1) ದುರ್ಯೋಧನನು ಪಾಂಡವರನ್ನು ಹೇಗೆ ಸ್ವಾಗತಿಸಿದನು ?

2) ಲಖನೋ ಪಟ್ಟಣ ವಿಲಾಸದಲ್ಲಿ ಮುಳುಗಿದ್ದುದು ಹೇಗೆ ?

3) ಟಿ.ವಿ.ಯ ಕ್ರಿಕೆಟ್ಟಿನ ಬಗೆಗೆ ಲೇಖಕರ ಅನಿಸಿಕೆ ಏನು ?

4) ಕಾಲ್‌ಸೆಂಟರ್‌ಗಳು ನಿರ್ವಹಿಸುವ ಕೆಲಸಗಳು ಎಂತಹವು ?

IV. ಎರಡು ಪ್ರಶ್ನೆಗಳಿಗೆ ಸ್ವಂತ ಆಲೋಚನೆ/ ಅನುಭವಗಳ ಹಿನ್ನೆಲೆಯಲ್ಲಿ ವಿಮರ್ಶಾತ್ಮಕ ಉತ್ತರ ಬರೆಯಿರಿ : (2×10=20)

1) ಆಟವನ್ನು ರಾಜಕಾರಣಕ್ಕೆ ಬಳಸಿಕೊಂಡ ಬಗೆ 'ದ್ಯೂತದ ಪ್ರಸಂಗ'ದಲ್ಲಿ ಹೇಗೆ ಚಿತ್ರಿತವಾಗಿದೆ ?

2) ಆಟದ ಗೀಳು ರಾಜಕೀಯ ಪತನಕ್ಕೆ ಕಾರಣವಾದ ಬಗೆಯನ್ನು 'ಚದುರಂಗದ ಆಟಗಾರರು' ಕಥೆಯ ಹಿನ್ನಲೆಯಲ್ಲಿ ವಿಶ್ಲೇಷಿಸಿ.

3) 'ಗಿಡುಗ ಮತ್ತು ಎರೆಹುಳ' ಕವಿತೆಯಲ್ಲಿ ಜಾಗತೀಕರಣದ ಪರಿಣಾಮವನ್ನು ಹೇಗೆ ಚಿತ್ರಿಸಲಾಗಿದೆ ?

4) ಕಾಲ್‌ಸೆಂಟರ್ ಉದ್ಯೋಗ ಸೃಷ್ಟಿಸಿರುವ ಸಮಸ್ಯೆಗಳನ್ನು ವಸುಧೇಂದ್ರ ಅವರ ಪ್ರಬಂಧದ ಹಿನ್ನೆಲೆಯಲ್ಲಿ ಪರಿಶೀಲಿಸಿ.

———————————

# IV Sem. B.Com. Examination, May 2011
## (Repeater Scheme)
## ಕನ್ನಡ ಭಾಷಾ ಪತ್ರಿಕೆ – IV
## ವ್ಯಾವಹಾರಿಕ ಕನ್ನಡ ಮತ್ತು ಬೋಳುವಾರರು ಮಹಮ್ಮದ್ ಕುಂಞ ಕಥೆಗಳು

Time : 3 Hours Max. Marks : 90

1. ಕೆಳಗಿನ ಗದ್ಯ ಭಾಗವನ್ನು ಸಂಕ್ಷೇಪಿಸಿ ಸೂಕ್ತ ಶೀರ್ಷಿಕೆ ಕೊಡಿ : **10**

ನಮ್ಮ ಮನೆ ಮಲೆನಾಡಿನ ವನಾಲಂಕೃತ ಗಿರಿ ಶ್ರೇಣಿಗಳ ತೊಡೆಯ ಮೇಲೆ ಕೂತಿದೆ. ನಮ್ಮ ಮನೆಯ ಹಿತ್ತಲು ಕಡೆಯನ್ನು ನಾವು ಬೆಟ್ಟದಿಂದ ಕಡಿದು ಯುದ್ಧ ಮಾಡಿ ಗೆದ್ದುಕೊಂಡಿದ್ದೇವೆ. ಮನೆಯಿಂದ ಪೂರ್ವ ದಿಕ್ಕಿಗೆ ಹತ್ತು ಮಾರು ಹೋಗುವುದರೊಳಗಾಗಿ ಬೆಟ್ಟವೇರಿ ಕಾಡಿನಲ್ಲಿ ತೂರಬೇಕು. ಮನೆಗೆ ಪೂರ್ವೋತ್ತರ, ದಕ್ಷಿಣ ಭಾಗಗಳಲ್ಲಿ ಭೀಮಾಕಾರದ ಪರ್ವತ ಶ್ರೇಣಿಗಳು ದಿಗಂತವನ್ನು ನಡುಭಾನಿಗೆತ್ತಿ ನಿಂತಿವೆ. ಪಶ್ಚಿಮ ಭಾಗದಲ್ಲಿಯೂ ಬೆಟ್ಟಗಳಿವೆ. ಆದರೆ ಒಂದು ಮೈಲಿಯಷ್ಟು ದೂರ ನಡುವೆಯೇನೋ ಬೇಕಾದಷ್ಟು ಕಾಡುಗಳಿವೆ. ನಮ್ಮ ಮನೆಗೂ, ಪೂರ್ವಾದ್ರಿಗೂ ನಡುವೆ ನಮ್ಮ ಅಡಿಕೆ ತೋಟದ ಒಂದು ತುದಿ ಸೆರಗು ಹಬ್ಬಿಕೊಂಡಿದೆ. ಆ ಸೆರಗಿನಲ್ಲಿಯೇ ನಮ್ಮ ಮನೆಯ ಕೆರೆಯಿದೆ. ಕೆರೆಗೂ, ಮನೆಗೂ ಅರ್ಧ ಫರ್ಲಾಂಗು ದೂರವಿದೆ. ಕೆರೆ ಬೆಟ್ಟದ ಬುಡದಲ್ಲಿ, ಅರಣ್ಯದ ಮಡಿಲಲ್ಲಿ ಮಲಗಿದೆ. ಕಾಡಿನ ಹೆಮ್ಮರಗಳು, ಪೊದೆಗಳು, ಬಿದಿರು ಮೆಳೆಗಳು, ಅದರ ನೀರಿನ ಮೇಲೆ ಚಾಚಿಕೊಂಡಿವೆ. ಪ್ರಾತಃಕಾಲದ ತರಣಾರುಣ ಜ್ಯೋತಿಯಲ್ಲಿ ನೋಡಿದರೆ ಮೈ ಮರೆಸುವಂತೆ ಮನೋಜ್ಞವಾಗಿರುವುದು.

ನಮ್ಮ ಉಪ್ಪರಿಗೆ ಪೂರ್ವ ದಿಕ್ಕಿಗೆ ತೆರೆದುಕೊಂಡಿದೆ. ಉಳಿದೆಲ್ಲ ದಿಕ್ಕಿಗೂ ಗೋಡೆ, ಕಿಟಕಿಗಳಿವೆ. ಅಲ್ಲಿ ಕುಳಿತು ನೋಡಿದರೆ, ನಮ್ಮೆದುರಾಗಿ, ಇಳಿಜಾರಾಗಿ ಮೇಲೆದ್ದಿರುವ ಅನಂತ ನಿಬಿಡಾರಣ್ಯ ಶ್ರೇಣಿಗಳು ಗಂಭೀರವಾಗಿ, ಸುಂದರವಾಗಿ ರಂಜಿಸುವುವು. ಅಲ್ಲಿ ನಮಗೆ ತಿಳಿಯುತ್ತದೆ, ಹಸುರು ಬಣ್ಣದಲ್ಲಿ ಎಷ್ಟು ಬಗೆಗಳಿರಬಹುದೆಂದು. ಆ ಗಿರಿಗಳಾಚೆಯಲ್ಲಿ ನೀಲಾಕಾಶವೂ, ಪಾತಾಳದಲ್ಲಿ ನಿಂತು ಸ್ವರ್ಗವನ್ನು ಇಣಕಿ ನೋಡುವಂತೆ, ಧೀರ ಗಂಭೀರವಾಗಿರುವುದು. ಈ ಗಿರಿ ಶಿಖರ ರೇಖೆಯಲ್ಲಿ ಇತರ ವೃಕ್ಷಗಳಿಗಿಂತ ಹಿರಿದಾಗಿ, ಎತ್ತರವಾಗಿ ಬೆಳೆದ ಹೆಮ್ಮರಗಳು ಆಕಾಶ ಪಟದಲ್ಲಿ ಬರೆದು ಕೆತ್ತಿ ಮೆತ್ತಿದ ಸಜೀವ ಚಿತ್ರಗಳಂತೆ ತೋರಿ, ವಿಶ್ವ ವರ್ಣ ಶಿಲ್ಪಿಯ ವರ್ಣನಾ ವೈಖರಿಯ ಕಲಾ ಕೌಶಲವನ್ನು ಸಾರುವ ಗೆಲ್ಲಂಬಗಳ ಮೇಲೆ ಹಾರಾಡುವ ಶ್ಯಾಮಲ ಕೇತನಗಳಂತೆ ಕಂಗೊಳಿಸುವುವು.

2. ಹುದ್ದೆಗಳ ಜಾಹೀರಾತಿನ ಮುಖ್ಯ ಅಂಶಗಳು ಯಾವುವು ? ವ್ಯಾಪಾರ ಸಂಸ್ಥೆಯೊಂದಕ್ಕೆ ಗುಮಾಸ್ತ ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸುವ ಜಾಹೀರಾತೊಂದನ್ನು ಸಿದ್ಧಪಡಿಸಿ. **10**

**ಅಥವಾ**

ಅಭ್ಯರ್ಥನ ಪತ್ರ ಎಂದರೇನು ? ಅದರ ಲಕ್ಷಣಗಳನ್ನು ಮಾದರಿ ಸಹಿತ ರಚಿಸಿ.

3. ಕೂಡು ಬಂಡವಾಳ ಸಂಸ್ಥೆಯ ಕಾರ್ಯದರ್ಶಿಯ ಕರ್ತವ್ಯಗಳು ಯಾವುವು ? ವಿವರಿಸಿ. **10**

**ಅಥವಾ**

ಬೆಂಗಳೂರು ಮೋಟಾರು ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯ ತಿಳುವಳಿಕೆ ಪತ್ರ, ಕಾರ್ಯಸೂಚಿ, ನಡವಳಿಕೆಯನ್ನು ಬರೆಯಿರಿ.

4. ವರದಿ ಎಂದರೇನು ? ಅದರಲ್ಲಿ ಎಷ್ಟು ವಿಧ ? ಏಕ ವ್ಯಕ್ತಿ ವರದಿಯ ಮಾದರಿ ಬರೆದು ವಿವರಿಸಿ. **10**

ಅಥವಾ

ಸಮಿತಿ ವರದಿಯ ಲಕ್ಷಣಗಳೇನು ? ನಿಮ್ಮ ಊರಿನಲ್ಲಿ ಸಹಕಾರ ಸಂಘವೊಂದನ್ನು ಪ್ರಾರಂಭಿಸಲು ನೇಮಕವಾದ ಸಮಿತಿ ವರದಿಯೊಂದನ್ನು ರಚಿಸಿ.

5. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ : **(4×5=20)**

1) ಕೂಡು ಬಂಡವಾಳ ಸಂಸ್ಥೆ
2) ಹಾಜರಾತಿ ವರದಿ
3) ಅಭ್ಯರ್ಥನ ಪತ್ರ
4) ಸಂಕ್ಷೇಪ ಲೇಖನ
5) ನಡವಳಿಕೆ
6) ಅಧ್ಯಕ್ಷರ ಭಾಷಣ

6. ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ : **(2×5=10)**

1) ಜೋಸೆಫ್ ಭಿಕ್ಷುಕನಾಗಲು ಕಾರಣವೇನು ?
2) 'ಆಖಿರತ್' ಕಥೆಯಲ್ಲಿ ಬರುವ ಸಂಜೀವ ಮತ್ತು ಗಿರಿಜಳ ಪಾತ್ರ ಪರಿಚಯಿಸಿ.
3) ಅದ್ದು ತನ್ನ ಹೆಂಡತಿ ಸಲ್ಮಾಳಿಗೆ ತಲಾಕ್ ಕೊಡಲು ಕಾರಣವೇನು ?
4) ಮುತ್ತುಪ್ಪಾಡಿಯ ಜನರು ಬೇಬಿಯ ಬಗ್ಗೆ ಏನೆಂದು ಮಾತನಾಡಿಕೊಳ್ಳುತ್ತಿದ್ದರು ?

7. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ : **(2×10=20)**

1) 'ದೇವರುಗಳ ರಾಜ್ಯದಲ್ಲಿ' ಕಥೆಯ ಸಾರಾಂಶವೇನು ? ವಿವರಿಸಿ.
2) 'ಇದ್ದತ್' ಎಂದರೇನು ? ಇಲ್ಲಿ ಬರುವ ಮೆಹರುನ್ನೀಸಾಳ ಪಾತ್ರವನ್ನು ವಿವರಿಸಿ.
3) 'ಅಂಕ' ಕಥೆಯ ಸ್ವಾರಸ್ಯವನ್ನು ವಿವರಿಸಿ.
4) ಚಂದ್ರಣ್ಣ ಮತ್ತು ರೊಟ್ಟಿ ಪಾತಮ್ಮ ಇವರಿಬ್ಬರ ಪರಿಚಯವನ್ನು 'ಒಂದು ತುಂಡು ಗೋಡೆ' ಕಥೆಯ ಹಿನ್ನೆಲೆಯಲ್ಲಿ ಮಾಡಿ ಕೊಡಿ.

---